
**ದೂರು/ ಕುಂದುಕೊರತೆ ದಾಖಲಿಸುವ ವಿಧಾನ:-**

1. www.ksrtc.org/oms ವೆಬ್‌ಸೈಟ್‌ಗೆ ಲಾಗ್-ಇನ್ ಆಗುವುದು. ಲಾಗ್-ಇನ್ ಆಗಲು oms ನ User Name ಮತ್ತು Password ನಮೂದಿಸುವುದು. ಆಗ ಪರದೆಯಲ್ಲಿ ಕೆಳಗಿನಂತೆ ಕಾಣಿಸಿಕೊಳ್ಳುತ್ತದೆ.





2. ನೌಕರರು ತಮ್ಮ ದೂರು ದಾಖಲಿಸಲು ಪರದೆಯಲ್ಲಿನ 'ಕುಂದುಕೊರತೆಗಳ ನೋಂದಣಿ' ಮೇಲೆ ಕ್ಲಿಕ್ ಮಾಡುವುದು. ತೆರೆದುಕೊಳ್ಳುವ ಪರದೆಯಲ್ಲಿ ಕಾಣಿಸಿಕೊಳ್ಳುವ 1. ಸೇವಾ ಸೌಲಭ್ಯ ಸಂಬಂಧಪಟ್ಟ ಕುಂದುಕೊರತೆಗಳು 2. ಕರ್ತವ್ಯ ನಿರ್ವಹಣೆಗೆ ಸಂಬಂಧಪಟ್ಟ ಕುಂದುಕೊರತೆಗಳು ಹಾಗೂ 3. ಮೇಲಾಧಿಕಾರಿಗಳಿಂದ ಕಿರುಕುಳ ಅಥವಾ ಶೋಷಣೆಗೆ ಸಂಬಂಧಿಸಿದ ದೂರುಗಳ ಪೈಕಿ ತಾವು ದಾಖಲಿಸಬೇಕಾದ ಕುಂದುಕೊರತೆಯನ್ನು ಆಯ್ಕೆ ಮಾಡಿಕೊಳ್ಳುವುದು.



**i. <u>ಸೇವಾ ಸೌಲಭ್ಯ ಕುರಿತ ಕುಂದುಕೊರತೆ:</u>**

- ಇದರ ಮೇಲೆ ಕ್ಲಿಕ್ ಮಾಡಿದಾಗ ಬಲಭಾಗದ ಆಯ್ಕೆ ಪಟ್ಟಿಯಲ್ಲಿ ಈ ಕೆಳಗಿನ ಕುಂದುಕೊರತೆಗಳ ವಿವರಗಳು ಕಾಣಿಸಿಕೊಳ್ಳುತ್ತದೆ. ಅದರಲ್ಲಿ ನೌಕರರು ತಮ್ಮ ಕುಂದುಕೊರತೆಗಳನ್ನು ಆಯ್ಕೆ ಮಾಡಿಕೊಳ್ಳುವುದು.
- ಒಂದು ವೇಳೆ, ನೌಕರರು ತಾವು ಆಯ್ಕೆ ಮಾಡಿಕೊಂಡ ಕುಂದುಕೊರತೆಯ ಬಗ್ಗೆ ವಿವರಣೆ ನೀಡಲು ಇಚ್ಚಿಸಿದಲ್ಲಿ ಅದನ್ನು 'ವಿವರಣೆ' ಯಡಿ ಬರೆಳಚ್ಚು ಮಾಡಬಹುದು. ಜೊತೆಗೆ, ಪೂರಕ ದಾಖಲಾತಿಗಳನ್ನು ಅಡಕಗೊಳಿಸಲು ಕೆಳಗಿನಂತೆ ಅವಕಾಶವನ್ನು ಕಲ್ಪಿಸಲಾಗಿದೆ.




**ii. <u>ಕರ್ತವ್ಯಕ್ಕೆ ಸಂಬಂಧಿಸಿದ ಕುಂದುಕೊರತೆ:</u>**

- ಇದರ ಮೇಲೆ ಕ್ಲಿಕ್ ಮಾಡಿದಾಗ ಬಲಭಾಗದ ಆಯ್ಕೆ ಪಟ್ಟಿಯಲ್ಲಿ ಈ ಕೆಳಗಿನಂತೆ ಕುಂದುಕೊರತೆಗಳ ವಿವರಗಳು ಕಾಣಿಸಿಕೊಳ್ಳುತ್ತದೆ. ಅದರಲ್ಲಿ ನೌಕರರು ತಮ್ಮ ಕುಂದುಕೊರತೆಗಳನ್ನು ಆಯ್ಕೆ ಮಾಡಿಕೊಳ್ಳುವುದು.
- ಒಂದು ವೇಳೆ, ನೌಕರರು ತಾವು ಆಯ್ಕೆ ಮಾಡಿಕೊಂಡ ಕುಂದುಕೊರತೆಯ ಬಗ್ಗೆ ವಿವರಣೆ ನೀಡಲು ಇಚ್ಚಿಸಿದಲ್ಲಿ ಅದನ್ನು 'ವಿವರಣೆ' ಯಡಿ ಬೆರಳಚ್ಚು ಮಾಡಬಹುದು. ಜೊತೆಗೆ, ಪೂರಕ ದಾಖಲಾತಿಗಳನ್ನು ಅಡಕಗೊಳಿಸಲು ಅವಕಾಶವನ್ನು ಕಲ್ಪಿಸಲಾಗಿದೆ.


**iii. <u>ಕಿರುಕುಳ ಸಂಬಂಧಿಸಿದ ದೂರು:</u>**

- ಇದರ ಮೇಲೆ ಕ್ಲಿಕ್ ಮಾಡಿದಾಗ ಯಾರ ವಿರುದ್ಧ ದೂರು ದಾಖಲಿಸಬೇಕಿದೆಯೋ ಅವರ ಪದನಾಮವನ್ನು ಬಲಭಾಗದ ಆಯ್ಕೆ ಪಟ್ಟಿಯಲ್ಲಿ ಆಯ್ಕೆ ಮಾಡಿಕೊಳ್ಳುವುದು.
- ಒಂದು ವೇಳೆ, ನೌಕರರು ಕಿರುಕುಳ ಕುರಿತ ದೂರಿನ ಬಗ್ಗೆ ವಿವರಣೆ ನೀಡಲು ಇಚ್ಚಿಸಿದಲ್ಲಿ ಅದನ್ನು 'ವಿವರಣೆ' ಯಡಿ ಬೆರಳಚ್ಚು ಮಾಡಬಹುದು. ಜೊತೆಗೆ, ಪೂರಕ ದಾಖಲಾತಿಗಳನ್ನು ಅಡಕಗೊಳಿಸಲು ಅವಕಾಶವನ್ನು ಕಲ್ಪಿಸಲಾಗಿದೆ.

3. ಕೊನೆಯದಾಗಿ 'ಸಲ್ಲಿಸು' ಬಟನ್ ಅನ್ನು ಒತ್ತುವುದು. ವಿವರಗಳನ್ನು ಬದಲಾಯಿಸಲು ಅಥವಾ ಅಳಿಸಲು 'ಹಿಂದಕ್ಕೆ ಹೋಗು' ಬಟನ್ ಅನ್ನು ಒತ್ತುವುದು.

4. ದೂರು ನೋಂದಣಿಯಾದ ನಂತರ Generate ಆಗುವ ದೂರು ಸಂಖ್ಯೆ ಮತ್ತು ಸಂಬಂಧಪಟ್ಟ ಶಾಖೆಯ ವಿವರವನ್ನು ಮುಂದಿನ ವಿಚಾರಣೆಗಾಗಿ ಬಳಸಬಹುದಾಗಿದೆ.
5. ಈ ತಂತ್ರಾಂಶವು oms ತಂತ್ರಾಂಶಕ್ಕೆ ಲಿಂಕ್ ಆಗಿದ್ದು, ಸೇವಾ ಸೌಲಭ್ಯ ಸಂಬಂಧಪಟ್ಟ ಕುಂದುಕೊರತೆಗಳು ಮತ್ತು ಕರ್ತವ್ಯ ನಿರ್ವಹಣೆಗೆ ಸಂಬಂಧಪಟ್ಟ ಕುಂದುಕೊರತೆಗಳು ದೂರು ದಾಖಲಿಸಿದ ನೌಕರರು ಕರ್ತವ್ಯ ನಿರ್ವಹಿಸುತ್ತಿರುವ ವಿಭಾಗದ ಸಂಬಂಧಪಟ್ಟ ಶಾಖೆಗಳಿಗೆ ಹೋಗುತ್ತದೆ.
6. ಕಿರುಕುಳ ಸಂಬಂಧಪಟ್ಟಂತೆ ದಾಖಲಿಸಿದ ದೂರುಗಳು, ದೂರು ದಾಖಲಿಸಿದ ನೌಕರರು ಕರ್ತವ್ಯ ನಿರ್ವಹಿಸುತ್ತಿರುವ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಯವರಿಗೆ ಹೋಗುತ್ತದೆ.
7. ವಿಭಾಗೀಯ ನಿಯಂತ್ರಣಾಧಿಕಾರಿಗಳ ಮೇಲೆ ದಾಖಲಾಗುವ ಕಿರುಕುಳ ಸಂಬಂಧಪಟ್ಟ ದೂರು ವಿಭಾಗದ ಉಸ್ತುವಾರಿ ಅಧಿಕಾರಿಗೆ ಹೋಗುತ್ತದೆ.

**<u>ಕುಂದುಕೊರತೆಯ ಸ್ಥಿತಿ:–</u>** ಕುಂದುಕೊರತೆಯ ಸ್ಥಿತಿಯನ್ನು ತಿಳಿದುಕೊಳ್ಳಲು 'ಕುಂದುಕೊರತೆಯ ಸ್ಥಿತಿ' ಯ ಮೇಲೆ ಕ್ಲಿಕ್ ಮಾಡುವುದು. ಕೆಳಗಿನಂತೆ ತೆರೆದುಕೊಳ್ಳುವ ಪರದೆಯಲ್ಲಿ ತಾವು ದಾಖಲಿಸಿದ ಕುಂದುಕೊರತೆಗಳ ವಿವರವನ್ನು ನೋಡಬಹುದಾಗಿದೆ.



**<u>ಮೇಲ್ಮನವಿ ಸಲ್ಲಿಸುವ ವಿಧಾನ:</u>**

ತಾವು ದಾಖಲಿಸಿದ ಕುಂದುಕೊರತೆಗಳ ಬಗ್ಗೆ ವಿಭಾಗದ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ನೌಕರರಿಗೆ ಸಮಾಧಾನ ಆಗದೇ ಇದ್ದಲ್ಲಿ ಈ ಕೆಳಗಿನಂತೆ ತಮ್ಮ ಪ್ರತಿಕ್ರಿಯೆಯನ್ನು ಕೆಳಗಿನಂತೆ ಸಲ್ಲಿಸಬಹುದು.



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
Karnataka State Road Transport Corporation

HOME CONTACT LOGOUT

ವಿಷಯ:- ರಜೆ - ಗಳಿಕೆ ರಜೆ

ವಿವರಣೆ :-
ಮಾನ್ಯರೇ, ಗಳಿಕೆ ರಜೆ ಸರಿಪಡಿಸಿಕೊಡಲು ಕೋರಲಾಗಿದೆ. ಧನ್ಯವಾದಗಳು.

ಅರ್ಜಿ ಸಲ್ಲಿಕೆಯಾದ ದಿನಾಂಕ :- 2021-03-09 17:16:38

Document Uploaded :

Status: closed

ದಾಖಲಾದ ದೂರಿನ ಇತಿಹಾಸ:


| | |
|---|---|
| ದೂರಿನ ಸಂಖ್ಯೆ | 70 |
| ಕ್ರಮ ವಹಿಸಬೇಕಾದ ಅಧಿಕಾರಿ/ಶಾಖೆ | ವಿಭಾಗೀಯ ಆಡಳಿತಾಧಿಕಾರಿ |
| ದೂರಿನ ಸ್ಥಿತಿ | ಕ್ರಮವಹಿಸಲಾಗಿದೆ |
| ವಹಿಸಲಾದ ಕ್ರಮದ ವಿವರಣೆ | ನಿಮ್ಮ ಗಳಿಕೆ ರಜೆಯನ್ನು ನಿಮ್ಮ ಹಾಜರಾತಿಯಂತೆ ಸರಿಪಡಿಸಲಾಗಿದೆ. ಧನ್ಯವಾದಗಳು. |
| ಸಮಯ | 2021-03-09 17:16:39 |


ಮೇಲಾಧಿಕಾರಿಗಳು ತೆಗೆದುಕೊಂಡ ಕ್ರಮ ಸಮಾದಾನಕರವಾಗಿದೆಯೇ? ಹೌದು
ಹೌದು
ಇಲ್ಲ

ಪ್ರತಿಕ್ರಿಯೆ ಸಲ್ಲಿಸಿ

**ಸ್ವೀಕರಿಸಿದ ದೂರು / ಕುಂದುಕೊರತೆ ವಿಲೇವಾರಿ ಸಂಬಂಧ ವಿಭಾಗದ ಅಧಿಕಾರಿಗಳು/ವಿಭಾಗೀಯ ನಿಯಂತ್ರಣಾಧಿಕಾರಿಗಳು ಮತ್ತು ಉಸ್ತುವಾರಿ ಅಧಿಕಾರಿಗಳು ಅನುಸರಿಸಬೇಕಾದ ವಿಧಾನ :**

1. www.ksrtc.org/oms ವೆಬ್‌ಸೈಟ್‌ಗೆ ಲಾಗ್-ಇನ್ ಆಗುವುದು. ಲಾಗ್-ಇನ್ ಆಗಲು oms ನ User Name ಮತ್ತು Passward ನಮೂದಿಸುವುದು.
2. ನಂತರ ತೆರೆಯುವ ಪರದೆಯಲ್ಲಿ ಕುಂದುಕೊರತೆಯ ವಿವರಗಳು ಕೆಳಗಿನಂತೆ ಕಾಣಿಸಿಕೊಳ್ಳುತ್ತದೆ. ಅದರ ಮೇಲೆ ಕ್ಲಿಕ್ ಮಾಡಿ ದೂರಿನ ವಿವರ/ಅಡಕಗಳನ್ನು ನೋಡಿಕೊಳ್ಳಬಹುದು ಹಾಗೂ ದೂರಿನ ಸಂಬಂಧ ತೆಗೆದುಕೊಂಡ ಕ್ರಮದ ವಿವರಣೆ ನೀಡಲು ಮತ್ತು ಅಡಕಗಳು ಇದ್ದಲ್ಲಿ ಲಗತ್ತಿಸಲು ಸಹ ಕೆಳಗಿನಂತೆ ಅವಕಾಶ ನೀಡಲಾಗಿದೆ.




ನೌಕರರ ಕುಂದು ಕೊರತೆ/ ಸಮಸ್ಯೆಗಳು:

#36 ಮೇಲಾಧಿಕಾರಿಗಳಿಂದ ಕಿರುಕುಳ ಅಥವಾ ಶೋಷಣೆ

ವಿಷಯ: ಮೇಲಾಧಿಕಾರಿಗಳಿಂದ ಕಿರುಕುಳ ಅಥವಾ ಶೋಷಣೆ

ದೂರು ದಾಖಲಾದ ಸಮಯ : 2021-03-04 13:16:24

ದೂರಿನ ವಿವರಣೆ :
kjasdklfhklasjhk hhkjlahsjkdh lkhj OCCCCC

**ಕಿರುಕುಳ ನೀಡಿದವರು:-** ವಿಭಾಗೀಯ ನಿಯಂತ್ರಣಾಧಿಕಾರಿ

ದೂರಿನ ಇತಿಹಾಸ:

| ದೂರಿನ ಸಂಖ್ಯೆ | ಕ್ರಮ ವಹಿಸಬೇಕಾದ ಅಧಿಕಾರಿ/ಶಾಖೆ | ದೂರಿನ ಸ್ಥಿತಿ | ವಹಿಸಲಾದ ಕ್ರಮದ ವಿವರಣೆ | ಸಮಯ |
|---|---|---|---|---|
| 36 | ಉಸ್ತುವಾರಿ ಅಧಿಕಾರಿ | ಬಾಕಿಯಿದೆ | | 2021-03-04 13:16:25 |

ನಿಮ್ಮ ಪ್ರತಿಕ್ರಿಯೆಯನ್ನು ದಾಖಲಿಸಿ

ಷರಾ

ಕುಂದು ಕೊರತೆಯ ಸ್ಥಿತಿ:

ಆಯ್ಕೆ ಮಾಡಿ

submit

Activate Windows
Go to Settings to activate Windows.

#32 ವೇತನ ಬಡ್ತಿ- ವಿಶೇಷ ವೇತನ ಬಡ್ತಿ